ಹೇಳಿ; ಏಕೆಂದರೆ ಇಬ್ಬರು ಸಚಿವರೂ ಇಲ್ಲಿ ಇರುವುದರಿಂದ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಸರ್ಕಾರದ ಒಂದು ನಿರ್ಧಾರವಾಗಬೇಕು.

ಡಾ॥ಹೆಚ್.ಸಿ. ಮಹದೇವಪ್ಪ : ತಾವು ಹೇಳಿದ್ದುದು ಅರ್ಥವಾಗಿದೆ. ಲೋಕಸೇವಾ ಆಯೋಗವಾದ ನೇಮಕ ಮಾಡಿಕೊಳ್ಳುವಂತಹ ಪ್ರೊಸೆಸ್ ನಡೆಯುತ್ತಾ ಇರುವುದರಿಂದ ಸಾಧ್ಯವಾದಷ್ಟು ಜಾಗ್ರತೆಯಾಗಿ ನೇಮಕ ಮಾಡಿಕೊಳ್ಳುವಂತಹ ವ್ಯವಸ್ಥೆ ಮಾಡುತ್ತೇವೆ.

ರಾಜ್ಯದಲ್ಲಿ 95-96ನೇ ಸಾಲಿನಲ್ಲಿ ಹೊಸದಾಗಿ ಆಸ್ಪತ್ರೆಗಳ ಮಂಜೂರಾತಿ.

105 - ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಆಸ್ಪತ್ರೆ ಪ್ರಾರಂಭಿಸಲು ಸರ್ಕಾರದವರು ಎನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ?

ಆ) ಹಾಗಿದ್ದಲ್ಲಿ ಪ್ರತಿ ಜಿಲ್ಲೆಗೆ ಹೊಸದಾಗಿ ಎಷ್ಟೆಷ್ಟು ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗುವುದು?

ಇ) ವಿಜಾಪುರ ಜಿಲ್ಲಾ ಬೀಳಗಿ, ಮತ ಕ್ಷೇತ್ರದಲ್ಲಿ ಎಷ್ಟು ಹೊಸ ಆಸ್ಪತ್ರೆಗಳನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರು?

ಈ) ಕಳೆದ ನಾಲ್ಕು ವರ್ಷಗಳಿಂದ ಬೀಳಗಿ ಮತ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಗೋಟೆ ಗ್ರಾಮದವರು ಎಲ್ಲಾ ಸೌಲಭ್ಯಗಳನ್ನು ಪೂರೈಸಿದ್ದರೂ ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ನಿಜವೇ? ಹಾಗಿದ್ದಲ್ಲಿ ಈ ವರ್ಷದಲ್ಲಿ ಆಸ್ಪತ್ರೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 50 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಾಗೂ 10 ಸಮುದಾಯ ಆರೋಗ್ಯ ಕೇಂದ್ರಗಳನ್ನು 95-96ನೇ ಸಾಲಿನಲ್ಲಿ ಮಂಜೂರು ಮಾಡುವ ಗುರಿಯನ್ನು ಹೊಂದಲಾಗಿದೆ.

ಆ) ಜಿಲ್ಲಾವಾರು ಗುರಿಯ ಪಟ್ಟಿಯನ್ನು ಲಗತ್ತಿಸಿದೆ.

ಇ) ಸ್ಥಳವನ್ನು ನಿಗದಿಪಡಿಸಿರುವುದಿಲ್ಲ.

ಈ) ಕಳೆದ ಆರ್ಥಿಕ ಸಾಲಿನಲ್ಲಿ ಪ್ರಸ್ತಾವನೆ ಬಂದಿರು ಸರ್ಕಾರದಿಂದ ಮಂಜೂರಾತಿ ದೊರೆತಿಲ್ಲ. ಈ ಸಾಲಿನಲ್ಲಿ ಜಿಲ್ಲಾ ಪಂಚಾಯತ್‌ನಿಂದ ಪ್ರಸ್ತಾವನೆ ಬಂದರೆ ಪರಿಶೀಲಿಸಲಾಗುವುದು.

ಅನುಬಂಧ - 1

ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ಗುರಿಯ ಜಿಲ್ಲಾವಾರು ತಃಖ್ತೆ

ಕ್ರ ಸಂ	ಜಿಲ್ಲೆ	ಪ್ರಾ.ಆ. ಕೇಂದ್ರ	ಸಮುದಾಯ ಆರೋಗ್ಯ ಕೇಂದ್ರ
1.	ಬೆಂಗಳೂರು (ನಗರ)	3	1
2.	ಬೆಂಗಳೂರು (ಗ್ರಾ)	2	ಗುರಿ ನಿಗಧಿಪಡಿಸಿಲ್ಲ
3.	ಚಿತ್ರದುರ್ಗ	2	ಗುರಿ ನಿಗಧಿಪಡಿಸಿಲ್ಲ
4.	ಕೋಲಾರ	4	1
5.	ತುಮಕೂರು	3	1
6.	ಶಿವಮೊಗ್ಗ	2	1
7.	ಬೆಳಗಾಂವ	3	1
8.	ಬಿಜಾಪುರ	3	ಗುರಿ ನಿಗಧಿಪಡಿಸಿಲ್ಲ
9.	ಧಾರವಾಡ	6	"
10.	ಉತ್ತರ ಕನ್ನಡ	ಗುರಿ ನಿಗಧಿಪಡಿಸಿಲ್ಲ	"
11.	ಬಳ್ಳಾರಿ	2	1
12.	ಬೀದರ್	6	1
13.	ರಾಯಚೂರು	6	1
14.	ಗುಲ್ಬರ್ಗಾ	2	ಗುರಿ ನಿಗಧಿಪಡಿಸಿಲ್ಲ
15.	ಮಂಡ್ಯ	6	1
16.	ಮೈಸೂರು	ಗುರಿ ನಿಗಧಿಪಡಿಸಿಲ್ಲ	ಗುರಿ ನಿಗಧಿಪಡಿಸಿಲ್ಲ
17.	ಹಾಸನ	"	"
18.	ಚಿಕ್ಕಮಗಳೂರು	"	ಗುರಿ ನಿಗಧಿಪಡಿಸಿಲ್ಲ
19.	ದಕ್ಷಿಣ ಕನ್ನಡ	"	01
20.	ಕೊಡಗು	"	ಗುರಿ ನಿಗಧಿಪಡಿಸಿಲ್ಲ
		50	10

ಶ್ರೀ ಜೆ.ಜಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, 1995-96ನೇ ಸಾಲಿನಲ್ಲಿ ಇಡೀ ರಾಜ್ಯಕ್ಕೆ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಹಾಗೂ 10 ಸಮುದಾಯ ಕೇಂದ್ರಗಳನ್ನು ಮಂಜೂರು ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದು ಇಡೀ ರಾಜ್ಯಕ್ಕೆ ಸಾಕಾಗಬಹುದಾಗಿದೆ, ಹಾಗೂ ಇವತ್ತು ಮುಂಜಾನೆ ಆಕಾಶವಾಣಿ ಮುಖಾಂತರ ನಮ್ಮ ಆರೋಗ್ಯ ಇಲಾಖೆಗೆ ಜಾಗತಿಕ ಬ್ಯಾಂಕಿನವರು 500 ಕೋಟಿ ರೂಪಾಯಿ ಕೊಟ್ಟಿದ್ದಾರೆ ಎಂದು ಕೇಳಿ ಬಂದಿದೆ. ಅದಕ್ಕೆ ಆರ್ಥಿಕವಾಗಿ ಯಾವುದೇ ತೊಂದರೆ ಬರುವ ಹಾಗಿಲ್ಲ. ಅದಕ್ಕೆ ರಾಜ್ಯಕ್ಕೆ ಇನ್ನು ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಮುದಾಯ ಕೇಂದ್ರಗಳನ್ನು ತೆರೆಯುವುದಕ್ಕೆ ಸಾಧ್ಯವೇ? ಎರಡನೆಯದು, ತಾವು ಜಿಲ್ಲಾವಾರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತು ಸಮುದಾಯ ಕೇಂದ್ರಗಳನ್ನು ಹಂಚಿಕೆ ಮಾಡಿದ್ದೀರಿ. ಇದು ಯಾವ ಆಧಾರದ ಮೇಲೆ ಮಾಡಿದ್ದೀರಿ? ಅದರಲ್ಲೂ ಬಿಜಾಪುರ ಜಿಲ್ಲೆ ಇಡೀ ರಾಜ್ಯದಲ್ಲಿ ಭೌಗೋಳಿಕವಾಗಿ ದೊಡ್ಡ ಜಿಲ್ಲೆ. ಇದಕ್ಕೆ ತಾರತಮ್ಯ ತಾವು ಮಾಡಿದ್ದೀರಿ ಎನ್ನುವ ಭಾವನೆ ಬರುತ್ತಿದೆ. ಹಾಗೂ ನಮ್ಮ ಜಿಲ್ಲೆಗೆ ಒಂದು ಸಮುದಾಯ ಕೇಂದ್ರವನ್ನು ತಾವು ನಿಗಧಿಪಡಿಸಿಲ್ಲ. ಇದಕ್ಕೆ ತಾವು ಸ್ಪಷ್ಟವಾದ ಉತ್ತರ ಕೊಡಬೇಕು. ಹಾಗೂ ಕಳೆದ ನಾಲ್ಕು ವರ್ಷದಿಂದ ಬೀಳಗಿ ಮತ ಕ್ಷೇತ್ರದ ದೊಡ್ಡೇ ಗ್ರಾಮದವರು ಈ ಆರೋಗ್ಯ ಕೇಂದ್ರದ ಸಲುವಾಗಿ ಕೇಳುತ್ತಿದ್ದಾರೆ. ಸಂಬಂಧಿಸಿದ ಕಾಗದ ಪತ್ರಗಳನ್ನು ಕಳುಹಿಸಿದರೂ ಸಹಿತ ತಮ್ಮ ಉತ್ತರ ಈ ಜಿಲ್ಲಾ ಪಂಚಾಯತಿಯಿಂದ ಪ್ರಸ್ತಾವನೆ ಬಂದಾಗ ಪರಿಶೀಲಿಸಲಾಗುವುದು ಎಂದು ಉತ್ತರ ಕೊಟ್ಟಿದ್ದೀರಿ. ದಯಮಾಡಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ನೀವು ಪರಿಶೀಲನೆ ಮಾಡುವಂತೆ ಹೇಳದೆ ತಾವು ಇದೇ ವರ್ಷದಿಂದ ಪ್ರಾರಂಭಿಸುವ ಭರವಸೆ ಏನಾದರೂ ಕೊಡುತ್ತೀರೋ, ಹಾಗೂ ನನ್ನ ಮತ ಕ್ಷೇತ್ರದಲ್ಲಿ ಸಾವಳಗಿ ಎಂಬ ಗ್ರಾಮದಲ್ಲಿ 10,000 ಜನಸಂಖ್ಯೆ ಇದೆ. ಕಳೆದ ಒಂದು ತಿಂಗಳಿನಿಂದ ಅಲ್ಲಿ ಯಾವುದೇ ಡಾಕ್ಟರಗಳು ಇಲ್ಲ. ಇದ್ದ ಡಾಕ್ಟರೂ ತೀರಿಕೊಂಡು ಹೋಗಿದ್ದಾರೆ. ಮತ್ತೆ ಗಿರಿಸಾಗರ ಎಂಬ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಂದು ವರ್ಷದಿಂದ ಒಬ್ಬ ಡಾಕ್ಟರ್ ಬರುತ್ತಿದ್ದಾರೆ, ಅವರು ಪ್ರತಿ ದಿನ ಕುದಿದು ಆಸ್ಪತ್ರೆಗೆ ಬರುತ್ತಿದ್ದಾರೆ. ಇದರ ಬಗ್ಗೆ ಸಂಪೂರ್ಣವಾಗಿ ತಮ್ಮ ಜೊತೆ ಚರ್ಚೆ ಮಾಡಿದ್ದೇನೆ. ಎಷ್ಟು ದಿನದಲ್ಲಿ ಡಾಕ್ಟರ್‌ಗಳನ್ನು ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಿ?

ಡಾ|| ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಭಾರತ ಸರ್ಕಾರದ ನೀತಿ ಸೂತ್ರದ ಪ್ರಕಾರ ಪ್ರತಿ 80,000 ದಿಂದ ಒಂದು ಲಕ್ಷ ಜನರಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಡಬೇಕೆಂದು ನಿಯಮ. ಅದರ ಪ್ರಕಾರ ರಾಜ್ಯಕ್ಕೆ 1,150 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಗತ್ಯ ಇದೆ. ಆದರೆ ಇವತ್ತು ನಮ್ಮ ಸರ್ಕಾರದಲ್ಲಿ ಸುಮಾರು 1,450 ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹೊಂದಿದ್ದೇವೆ. ಭಾರತ ಸರ್ಕಾರದ ನೀತಿ ಸೂತ್ರಕ್ಕಿಂತ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಈಗಾಗಲೇ ರಾಜ್ಯ ತೆಗೆಯತಕ್ಕಂತಹ ಅವಶ್ಯಕತೆ ಇಲ್ಲ. ಭಾರತ ಸರ್ಕಾರದ ಸೂತ್ರದ ಪ್ರಕಾರ. ಆದರೆ, ಉತ್ತರ ಭಾರತ, ಮತ್ತು ಉತ್ತರ ಕರ್ನಾಟಕ ಮತ್ತು ಇನ್ನಿತರ ಭಾಗಗಳಲ್ಲಿ ಅನೇಕ ಮಾನ್ಯ ಸದಸ್ಯರುಗಳು ಮತ್ತು ಸಾರ್ವಜನಿಕರು ಒತ್ತಾಯವನ್ನು ಮಾಡುವಂತಹ ಸಂದರ್ಭಗಳಲ್ಲಿ 150 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 1995-96ನೇ ಸಾಲಿನಲ್ಲಿ ಮಂಜೂರು ಮಾಡತಕ್ಕಂತಹ

ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ವಿಶ್ವ ಬ್ಯಾಂಕಿನಿಂದ ಐದು ನೂರು ಕೋಟಿ ರೂಪಾಯಿಗಳ ನೆರವು ನಮ್ಮ ರಾಜ್ಯಕ್ಕೆ ಒದಗುತ್ತಿದೆ. ಈ ನೆರವನ್ನು ಪಡೆದುಕೊಂಡರೂ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶ ಇಲ್ಲ. ಆದರೆ ರಾಜ್ಯದಲ್ಲಿ ಇರತಕ್ಕಂತಹ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿ ಅವಕ್ಕೆ ಆಧುನಿಕ ಉಪಕರಣಗಳನ್ನು ಮತ್ತು ಸಿಬ್ಬಂಧಿಗಳ ವೆಚ್ಚವನ್ನು ಮಾಡುವುದಕ್ಕೆ ಮಾತ್ರ ಅವಕಾಶವಿರುವುದರಿಂದ ಮುಂದಿನ ದಿನಗಳಲ್ಲಿ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸ್ಥಿತಿ-ಗತಿಗಳು ಸುಧಾರಿಸಿ ಹೆಚ್ಚು ಆಧುನೀಕರಣಗೊಂಡು ಜನತಗೆ ಹೆಚ್ಚು ಆರೋಗ್ಯ ಸವಲತ್ತುಗಳು ಒದಗಿಸುವುದಕ್ಕೆ ನೆರವಾಗುತ್ತಿದೆ. ಹೀಗಾಗಿ ಇವತ್ತು ನಾನು ರಾಷ್ಟ್ರದ ಆರೋಗ್ಯ ಮಾರ್ಗಸೂಚಿಗಿಂತ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಾವು ಹೊಂದಿದ್ದೇವೆ. ಮತ್ತು ಹಿಂದೆ ಇದ್ದಂತಹ ಎಂಭತ್ತು ಸಾವಿರದಿಂದ ಒಂದು ಲಕ್ಷ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೊಡತಕ್ಕಂತಹ ನೀತಿ ಸೂತ್ರವನ್ನು ಬದಲಾವಣೆ ಮಾಡಿ ಇವತ್ತು ಟ್ರೈಬಲ್ ಏರಿಯಾದಲ್ಲಿ 20,000ಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮತ್ತು ಸಾಮಾನ್ಯ ಏರಿಯಾಗಳಲ್ಲಿ 30,000ಕ್ಕೆ ಒಂದು ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಇರುವುದರಿಂದ, ಮತ್ತು ಸಾಧ್ಯವಾದಷ್ಟು ಜನತೆಗೆ ಹೆಚ್ಚು ಆರೋಗ್ಯ ಸವಲತ್ತುಗಳನ್ನು ಕೊಡಬೇಕೆಂಬ ಸದುದ್ದೇಶವನ್ನು ಇಟ್ಟುಕೊಂಡು ಎಷ್ಟು ಪ್ರಮಾಣದ ಆರೋಗ್ಯ ಕೇಂದ್ರಗಳು ಇದ್ದರೂ ಕೂಡ 1995-96ನೇ ಸಾಲಿನಲ್ಲಿ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ಥಾಪನೆ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಈ ಏರಿಯಾಗಳನ್ನು ನಿರ್ಧಾರ ಮಾಡಿ ಅಗತ್ಯಕ್ಕೆ ಅನುಗುಣವಾಗಿ ರಾಜಕೀಯ ಒತ್ತಡಕ್ಕೆ ಒಳಪಡದೆ ನಿಜವಾಗಿ ಕೂಡ ಈ ಆಸ್ಪತ್ರೆ ಸ್ಥಾಪನೆ ಜನತೆಗೆ ಅಗತ್ಯ ಆಗಿದೆಯೋ ಇಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಂಡು ನೀಡ್ ಬೇಸಡ್ ಮೇಲೆ ನಾವು ಆಸ್ಪತ್ರೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ. ಜೊತೆಗೆ ಸಿಬ್ಬಂದಿಯನ್ನು ತುಂಬುವುದಕ್ಕೆ ನಾನು ಈಗಾಗಲೇ ಬಹಳ ಕಾರ್ಯಕ್ರಮಗಳನ್ನು ವಿವರಿಸಿ ಹೇಳಿದ್ದೇನೆ. ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಇಲ್ಲಿ ಇರತಕ್ಕಂತಹ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತದೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಹದೇವಪ್ಪನವರು ಕೆಲವು ಸ್ಪಷ್ಟೀಕರಣಗಳನ್ನು ಕೊಟ್ಟಿದ್ದಾರೆ. ಏನೆಂದರೆ, ಪ್ರೈಮರಿ ಹೆಲ್ತ್ ಸೆಂಟರ್ ನಾವು ನೀಡ್ ಬೇಸಡ್ ಮೇಲೆ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ನೀಡ್ ಬೇಸಡ್ ಮೇಲೆ ಕೊಡುತ್ತೇವೆ ಎಂದು ಹೇಳಿದರೂ ಕೂಡ ಮೊನ್ನೆ ಅವರು ಏನು ಸರ್ಕಾರಿ ಆಜ್ಞೆ ತಂದಿದ್ದಾರೆ ಅದನ್ನು ನೋಡಿದರೆ ಎಲ್ಲಾ ಇನ್‌ಫ್ಲೂಯೆನ್ಸ್ ಬೇಸಡ್ ಮೇಲೆ ಆಗಿದೆಯೇ ಹೊರತಾಗಿ ನೀಡ್ ಬೇಸಡ್ ಆಗಿಲ್ಲ ಅಲ್ಲ. ಎಲ್ಲೆಲ್ಲಿ ಇನಫ್ಲೂಯೆನ್ಸ್ ಬಂತು ಅಂತಹ ಕಡೆ ಪ್ರೈಮರಿ ಹೆಲ್ತ್ ಸೆಂಟರ್ ಮಾಡಿದ್ದಾರೆ ಈಗ ಅವರು ಹೇಳಿದ ಪ್ರಕಾರ 30,000 ಪಾಪುಲೇಷನ್‌ಗೆ ಒಂದು ಕೊಡುತ್ತೇವೆ ಎಂದು ಹೇಳಿದ್ದಾರೆ. ನೀವು ಅದನ್ನು ಕೊಡುವಾಗ ಎಲ್ಲೆಲ್ಲಿ ವೇಕೆಂಟ್ ಬ್ಲಾಕ್ಸ್ ಇದೆ, ಯಾವುದೇ ಏರಿಯಾಗಳಲ್ಲಿ ಇರಲಿ, ಯಾವುದೇ ಜಿಲ್ಲೆ ಇರಲಿ, 30,000 ಜನಸಂಖ್ಯೆಗೆ ಬ್ಲಾಕ್ ಮಾಡಿ, ಎಲ್ಲಿಯಾದರೂ ಪಾಪ್ಯುಲೇಷನ್ ಹೆಚ್ಚು ಇದ್ದರೆ

ಅಂತಹ ಕಡೆ ಮೊದಲು ಗ್ರಾಂಟ್ ಮಾಡಿ. ಬೇಕಾದರೆ ನಿಮ್ಮ ಇನಪ್ಲ್ಯುಯೆನ್ಸ್ ಇನ್ನೊಂದು ಕಡೆ ಉಪಯೋಗ ಮಾಡಿ. ಮತ್ತ ಅಡಿಷನಲ್ ಏನಾದರೂ ಕೊಡಬೇಕಾದರೆ ಕೊಡಿ. ಅದರೆ ಎಲ್ಲಿ ವೇಕೆಂಟ್ ಬ್ಲಾಕ್ ಇರುತ್ತವೆ ಅದನ್ನು ಬಿಟ್ಟು ನೀವು ಇದ್ದಲ್ಲೇ ಪುನಃ ಪುನಃ ಸ್ಯಾಂಕ್ಷನ್ ಮಾಡಿದರೆ ಏನಾಗುತ್ತದೆ ಎಂದರೆ ಜನರ ಅವಶ್ಯಕತೆ ಅನುಸಾರವಾಗಿ ನೀವು ಆಸ್ಪತ್ರೆ ಕೊಡುತ್ತಿಲ್ಲ ಎಂದು ಬರುತ್ತದೆ. ಮೊನ್ನೆ ನೀರು ಎರಡು ಲೀಸ್ಟ್ ಮಾಡಿದರೂ ಕೂಡ ಅದು ಬೇಸಡ್ ಮೇಲೆ ಮಾಡಿಲ್ಲ. ಅಟಲೀಸ್ಟ್ ಈಗಲಾದರೂ ಮುಂದೆ ವೇಕೆಂಟ್ ಬ್ಲಾಕ್‌ನಲ್ಲಿ ಮೊದಲು ಕೊಟ್ಟು ತದನಂತರ ಅದು ಹೆಚ್ಚಿಗೆ ಇದ್ದರೆ ಪುನಃ ಏನಾದರೂ ಹಂಚುವುದಕ್ಕೆ ಪ್ರಯತ್ನ ಮಾಡುತ್ತೀರಾ ಎನ್ನತಕ್ಕಂತಹ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಜೆ.ಟಿ. ಪಾಟೀಲ್ : ನಾನು ಸ್ಪಷ್ಟವಾದ ಉತ್ತರವನ್ನು ಅಪೇಕ್ಷೆ ಮಾಡುತ್ತೇನೆ.

ಶ್ರೀ ಬಿ. ಪ್ರಕಾಶ್ ಹುಕ್ಕೇರಿ : ಸಮುದಾಯ ಕೇಂದ್ರವನ್ನು ರದ್ದುಪಡಿಸಿ ಬೆಳಗಾಂ ಜಿಲ್ಲೆಗೆ ಬೇರೆ ಕೊಟ್ಟಿದ್ದಾರೆ. ನಾನು ಸಚಿವರಿಗೆ ಸಂಪರ್ಕಿಸಿದಾಗ 1995-96ನೇ ಸಾಲಿನಲ್ಲಿ ಸಮುದಾಯ ಆರೋಗ್ಯ ಕೇಂದ್ರವನ್ನು ಮತ್ತೆ ಮಂಜೂರು ಮಾಡುತ್ತೇವೆ ಎಂದು ಹೇಳಿದರು. ಏನು ಈ ಸಾರಿ ಮಂಜೂರು ಮಾಡುತ್ತೀರಾ ಇಲ್ಲವೋ ಎಂಬುದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಪಿ. ಮುದ್ದ ಹನುಮೇಗೌಡ : ಹೊಸ ಆಸ್ಪತ್ರೆಗಳನ್ನು ಮಂಜೂರಾತಿ ಮಾಡಿದ್ದರ ಬಗ್ಗೆ ಹೇಳಿದ್ದಾರೆ. ಬಹಳ ಸಂತೋಷ. ಈಗ ಏನಾಗಿದೆ ಆಸ್ಪತ್ರೆಯಲ್ಲಿ ವೈದ್ಯರೇ ಇಲ್ಲದ ಆಸ್ಪತ್ರೆಗಳು ಬೇಕಾದಷ್ಟು ಇವೆ. ನಾನು ಆ ಬಗ್ಗೆ ಪ್ರಶ್ನೆ ಕೂಡ ಕೇಳಿದೆ. ಇಡೀ ರಾಜ್ಯದಲ್ಲಿ ವೈದ್ಯರೇ ಇಲ್ಲದೆ ಇರತಕ್ಕಂತಹ ಆಸ್ಪತ್ರೆಗಳು ಇವೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಮೂರು ಆಸ್ಪತ್ರೆಗಳು ಇವೆ. ಗುತ್ತಿಗೆ ಆಧಾರದ ಮೇಲೆ ಡಾಕ್ಟರಗಳನ್ನು ನೇಮಕ ಮಾಡುವುದರ ಬಗ್ಗೆ ಕೂಡ ಹೇಳಿದೆ. ಆದ್ದರಿಂದ ದಯಮಾಡಿ ಆಸ್ಪತ್ರೆಯಲ್ಲಿ ವೈದ್ಯರು ಇರತಕ್ಕಂಥದ್ದು ಕಡ್ಡಾಯ ಆಗಿರಬೇಕು ಎನ್ನುವುದರ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ಬಹಳ ಮುಖ್ಯವಾದಂತಹ, ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಮೊಬೈಲ್ ಆಸ್ಪತ್ರೆ ಮಾಡಿದರೆ ಬಹಳ ಖರ್ಚು ಕಡಿಮೆ ಆಗುತ್ತದೆ. ಒಂದು ನೂರು ಹಳ್ಳಿಯ ಜನ ಪಟ್ಟಣಕ್ಕೆ ಆಸ್ಪತ್ರೆಗೆ ಬರುವ ಬದಲು ಮೊಬೈಲ್ ವ್ಯಾನ್ ಹಳ್ಳಿಗಳಿಗೆ ಹೋಗಿ ಆರೋಗ್ಯ ಶಶ್ರೂಷೆ ಮಾಡಿದರೆ, ಆ ಜನರಿಗೆ ಆರೋಗ್ಯದ ಬಗ್ಗೆ ತಪಾಸಣೆ ಮಾಡಿದರೆ ನೂರು ಜನರ ಸಾರಿಗೆ ವ್ಯವಸ್ಥೆ ಕಡಿಮೆಯಾಗುತ್ತದೆ. ಆದುದರಿಂದ ಮೊಬೈಲ್ ವ್ಯಾನ್ ಕಲ್ಪನೆ ಬಹಳ ಜವಾಬ್ದಾರಿಯುತವಾದುದು. ಆದುದರಿಂದ ತಾವು ಇದರ ಬಗ್ಗೆ ದಯವಿಟ್ಟು ಗಂಭೀರವಾದಂತಹ ಆಲೋಚನೆಯನ್ನು ಮಾಡಿ ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆಗಳನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂತಹ ಉತ್ತರವನ್ನು ತಮ್ಮ ಮೂಲಕ ಸದನಕ್ಕೆ

ತಿಳಿಸುತ್ತೇನೆ. ಮೊಬೈಲ್ ಯೂನಿಟ್ ಮೂಲಕ ಒಂದು ಪ್ರದೇಶದ ಇಂಟೀರಿಯರ್ ಪ್ಲೇಸಗೆ ಹೋಗಿ, ಎಲ್ಲಿ ಆರೋಗ್ಯ ಸೌಲಭ್ಯಗಳು ಸಿಗದೇ ಇರುವಂತಹ ಬಡಜನರು ಇದ್ದಾರೆ ಅಂತಹವರಿಗೆ ಆರೋಗ್ಯ ಸವಲತ್ತುಗಳನ್ನು ವಿಸ್ತರಣೆ ಮಾಡುವುದಕ್ಕೆ ಮೊಬೈಲ್ ಯುನಿಟ್ ಹೆಚ್ಚು ಉಪಯೋಗಕಾರಿ ಎನ್ನುವಂತಹ ವಿಚಾರ ಸರ್ಕಾರದ ಗಮನದಲ್ಲಿ ಇದೆ. ನಾನು ಮೊದಲೇ ಹೇಳಿದಂತೆ ವಿಶ್ವಬ್ಯಾಂಕಿನ ನೆರವು, ಐಪಿಸಿ 9 ಮತ್ತು ವೆಸ್ಟ ಜರ್ಮನ್ ಪ್ರಾಜೆಕ್ಟ್ಸ ಉಪಯೋಗವನ್ನು ಪಡೆದುಕೊಂಡು ಈ ಮೊಬೈಲ್ ಆಸ್ಪತ್ರೆಯನ್ನು ಹೆಚ್ಚು ಶಕ್ತಿಶಾಲಿಯಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ ಎನ್ನುವಂತಹ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಹಾಗೂ ಹಿರಿಯ ಸದಸ್ಯರಾದ ಮಾನ್ಯ ಖರ್ಗೆಯವರು ಹೇಳಿದ ಹಾಗೆ ನಿಜವಾಗಲೂ ಸಹ ಕಳೆದ ಬಾರಿ 60ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೊಟ್ಟಂತಹ ಸಂದರ್ಭದಲ್ಲಿ ಗುಲ್ಬರ್ಗಾ ವಿಭಾಗಕ್ಕೆ ಹೆಚ್ಚು ಆಸ್ಪತ್ರೆಗಳನ್ನು ಮಂಜೂರಾತಿ ಮಾಡಿದೆ. ಅಲ್ಲಿಗೆ ಯಾರೂ ಕೇಳಲೇ ಇಲ್ಲ. ಆದರೂ ಸಹ ಬಳ್ಳಾರಿ, ರಾಯಚೂರು, ಗುಲ್ಬರ್ಗ, ಈ ಕಡೆ ಹೆಚ್ಚು ಆಸ್ಪತ್ರೆಗಳಿಗೆ ಮಂಜೂರಾತಿಯನ್ನು ಕಳೆದ ಬಾರಿ ಮಾಡಿದ್ದೇವೆ. ಈ ಸಾರಿಯೂ ಕೂಡ ವಿಶೇಷವಾಗಿ ಉತ್ತರ ಭಾಗಕ್ಕೆ ಹೆಚ್ಚು ಆಸಕ್ತಿಯನ್ನು ವಹಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯನ್ನು ಉತ್ತರ ಭಾಗದ 5-6 ಜಿಲ್ಲೆಗಳು ಅತ್ಯಂತ ಪ್ರಗತಿಯನ್ನು ಸಾಧನೆ ಮಾಡಿರುವುದರಿಂದ ಹೆಚ್ಚು ಒತ್ತನ್ನು ಕೊಡುವುದಕ್ಕೆ ಸರ್ಕಾರ ನಿರ್ಧಾರ ಮಾಡಿದೆ. ಹಾಗಾಗಿ ನೀಡ್ ಬೇಸ್ಡ ಆಧಾರದ ಮೇಲೆ ನಾವು ಆಸ್ಪತ್ರೆಗಳನ್ನು ಮಂಜೂರಾತಿ ಮಾಡುತ್ತೇವೆ ಎಂದು ಹೇಳುವುದರ ಜೊತೆಗೆ ಮಾನ್ಯ ಸದಸ್ಯರುಗಳು ಎಲ್ಲಾ ಕಡೆ ಆಸ್ಪತ್ರೆಗಳು ಬೇಕು ಎಂದರೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ಕೇಂದ್ರ ಸರ್ಕಾರದ ಮಾರ್ಗಸೂಚಿಗಿಂತ ಹೆಚ್ಚು ಆಸ್ಪತ್ರೆಗಳನ್ನು ಹೊಂದಿದ್ದೇವೆ. ಆದರೂ ಕೂಡ ಸರ್ಕಾರ ಪರಿಶೀಲನೆ ಮಾಡಿ ನಾರ್ಮ್ಸ ಇಟ್ಟುಕೊಂಡು ಅದರಂತೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೇವೆ.

ಶ್ರೀ ಎಸ್.ಸಿ. ಮುದ್ದ ಹನುಮೇಗೌಡ : ಮಾನ್ಯ ಉಪಾಧ್ಯಕ್ಷರೇ, ಇರತಕ್ಕಂಥ ಆಸ್ಪತ್ರೆಗಳಲ್ಲಿ ವೈದ್ಯರುಗಳು ಇಲ್ಲ. ಅಲ್ಲಿ ಸುಮ್ಮನೆ ಆಸ್ಪತ್ರೆಗಳು ಎಂದು ಇವೆ. ಒಬ್ಬರು ಡಾಕ್ಟರ್ ಅಥವಾ ಒಬ್ಬ ಎಎನ್ಎಂ ಇಲ್ಲ. ಸುಮ್ಮನೆ ಬೇಗ ಹಾಕಿಕೊಂಡಿದ್ದಾರೆ. ಅಂತಹ ಬೇಕಾದಷ್ಟು ಆಸ್ಪತ್ರೆಗಳು ಇವೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಪ್ರೌಢ ಶಾಲೆಯ ಆರೆಕಾಲಿಕ ಶಿಕ್ಷಕರ ಸಂಖ್ಯೆ

94 - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಅರೆಕಾಲಿಕ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಇವರುಗಳಲ್ಲಿ ಖಾಯಂ ಆಗಿರುವವರ ಸಂಖ್ಯೆ ಎಷ್ಟು?

ಇ) ಖಾಯಂ ಆಗದೇ ಇರುವವರ ಸಂಖ್ಯೆ ಎಷ್ಟು?